**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 05 |
| 2. | ಮಾನ್ಯ ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 27.01.2026 |
| 4. | ಉತ್ತರಿಸುವ ಸಚಿವರು | : | ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ರೈತರು ಕಬ್ಬು ಸರಬರಾಜು ಮಾಡುತ್ತಿದ್ದು, ಸುಮಾರು 2 ತಿಂಗಳುಗಳಿಂದ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬಿಲ್ಲಿನ ಮೊತ್ತ ಪಾವತಿ ಮಾಡದಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2025-26 ನೇ ಹಂಗಾಮಿನಲ್ಲಿ ಬೀದರ್ ಜಿಲ್ಲೆಯಲ್ಲಿ ಒಟ್ಟು 5 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಕಾರ್ಖಾನೆಗಳು ದಿನಾಂಕ: 15.01.2026 ಕ್ಕೆ ಇದ್ದಂತೆ ಒಟ್ಟು 10.63 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ, 92,831 ಮೆ.ಟನ್ ರಷ್ಟು ಸಕ್ಕರೆ ಯನ್ನು ಉತ್ಪಾದಿಸಿರುತ್ತದೆ. ಈ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಒಟ್ಟು 406.35 ಕೋಟಿಗಳಷ್ಟು ಕಬ್ಬಿನ ಬಿಲ್ಲು ಪಾವತಿಸಬೇಕಾಗಿದ್ದು, 165.54 ಕೋಟಿಗಳಷ್ಟು ಕಬ್ಬಿನ ಬಿಲ್ಲು ಮೊತ್ತ ಪಾವತಿಸಿದ್ದು, 249.52 ಕೋಟಿಗಳಷ್ಟು ಬಾಕಿ ಉಳಿಸಿಕೊಂಡಿರುತ್ತವೆ. ಸದರಿ ಹಂಗಾಮು ಚಾಲ್ತಿಯಲ್ಲಿರುವುದರಿಂದ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪೂರ್ಣವಾಗಿ ಕಬ್ಬಿನ ಬಿಲ್ಲನ್ನು ಪಾವತಿಸಲು ಇನ್ನು ಅವಕಾಶವಿರುತ್ತದೆ. |
| (ಆ) | ಬಂದಿದ್ದಲ್ಲಿ, ರೈತರ ಕಬ್ಬಿನ ಬಿಲ್ಲಿನ ಮೊತ್ತವನ್ನು ಶೀಘ್ರ ಪಾವತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ ಕಬ್ಬು (ನಿಯಂತ್ರಣ) ಆದೇಶ 1966 ರ ಕಲಂ 3(8) ರನ್ವಯ ಕಬ್ಬು ಸರಬರಾಜು ಮಾಡಿದ ರೈತರಿಗೆ 14 ದಿನಗಳ ಒಳಗಾಗಿ ಕಬ್ಬಿನ ಬಿಲ್ಲು ಪಾವತಿಸಲು ಕಾರ್ಖಾನೆಗಳಿಗೆ ಅವಕಾಶಗಳಿರುತ್ತವೆ.<br><br>ಬೀದರ್ ಜಿಲ್ಲೆಯ ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಲಿ., ಮೊಗದಲ್ ಗ್ರಾಮ, ಪೋಸ್ಟ್: ಮಾರಕುಂಡಾ, ತಾಲ್ಲೂಕು ಮತ್ತು ಜಿಲ್ಲೆ ಬೀದರ್, ಭಾಲ್ಕೇಶ್ವರ ಶುಗರ್ಸ್ ಲಿ. ಮಡಕಟ್ಟಿ ಕ್ರಾಸ್, ಬಾಜೋಳಗ, ತಾಲ್ಲೂಕು: ಭಾಲ್ಕಿ, ಜಿಲ್ಲೆ ಬೀದರ್, ದಿ ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ, ಬೀದರ್ ಮತ್ತು ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಮಪುರ ಗ್ರಾಮ, (ಜನವಾಡ ಹತ್ತಿರ) ತಾಲ್ಲೂಕು & ಜಿಲ್ಲೆ |

..............2

| | | |
|---|---|---|
| | | -ಬೀದರ್ ಈ ಕಾರ್ಖಾನೆಗಳು ನಿಯಮಾನುಸಾರ ರೈತರಿಗೆ ಕಬ್ಬಿನ ಬಿಲ್ಲನ್ನು ಪಾವತಿಸದೇ ಇರುವುದರಿಂದ ದಿನಾಂಕ: 20.12.2025 ಮತ್ತು 21.01.2026 ರಂದು ಶಾಸನಬದ್ಧ ನೋಟೀಸ್ ನೀಡಲಾಗಿರುತ್ತದೆ.<br><br>ಪ್ರಸ್ತುತ 2025-26ನೇ ಹಂಗಾಮು ಚಾಲ್ತಿಯಲ್ಲಿದ್ದು, ಕಾರ್ಖಾನೆಗಳಿಗೆ ಕಬ್ಬು ಬಿಲ್ಲು ಪಾವತಿಸಲು ಅವಕಾಶವಿರುತ್ತದೆ. ತಪ್ಪಿದ್ದಲ್ಲಿ ಸಂಬಂಧ ಪಟ್ಟ ಕಾರ್ಖಾನೆಗಳಿಗೆ ವಸೂಲಾತಿ ದೃಢೀಕರಣ ಪತ್ರ (Recovery Certificate) ನೀಡಿ ವಸೂಲಾತಿ ಕ್ರಮ ಜರುಗಿಸಲಾಗುವುದು. |

ಸಿಐ 46 ಎಸ್‌ಜಿಎಫ್ 2026

**ಶಿವನಂದ ಎಸ್ ಪಾಟೀಲ್**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು